**<u>ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕ:07.11.2025 ರಂದು ಪ್ರಮಾಣೀಕರಿಸಲಾಯಿತು.</u>**

**<u>ಪಾಟೀ ಸವಾಲು:ವಾದಿ ಪರ ಶ್ರೀ ಕೆ ಎಸ್ ವಿ ವಕೀಲರಿಂದ:</u>**

ನಾನು ನುಗ್ಗಹಳ್ಳಿಕೊಪ್ಪಲು ಗ್ರಾಮದ ನಿವಾಸಿ ಇರುತ್ತೇನೆ. ನಾನು ಈ ದಾವೆಯ ಬಗ್ಗೆ ತಿಳಿದುಕೊಂಡು ಬಂದಿರುತ್ತೇನೆ. 6 ನೇ ಪ್ರತಿವಾದಿಯಾದ ನಂಜುಂಡೇಗೌಡ ನನ್ನ ಊರಿನವರು ಎಂದರೆ ಸರಿ. ನನಗೆ ಬುದ್ದಿ ಬಂದಾಗಿನಿಂದಲೂ ನನಗೆ ಅವರ ಪರಿಚಯ ಇರುತ್ತದೆ. ನಾವಿಬ್ಬರೂ ಒಂದೇ ಸಮುದಾಯದವರು ಎಂದರೆ ಸರಿ.

6 ನೇ ಪ್ರತಿವಾದಿ ನನ್ನ ಜಮೀನಿನ ಪೂರ್ವ ದಿಕ್ಕಿನಲ್ಲಿರುವ 25 ಗುಂಟೆ ಸ್ವತ್ತನ್ನು ಖರೀದಿಸಿರುತ್ತಾರೆ. ನಾನು ನನ್ನ 1.08 ಎಕರೆ ಜಮೀನನ್ನು ಖರೀದಿಸಿರುತ್ತೇನೆ. ನಾನು ಖರೀದಿಸುವಾಗ ನನ್ನ ಜಮೀನಿನ ಅಕ್ಕಪಕ್ಕದ ಮಾಲೀಕರ ಬಗ್ಗೆ ತಿಳಿದುಕೊಂಡಿರುತ್ತೇನೆ. 6 ನೇ ಪ್ರತಿವಾದಿ ಖರೀದಿಸಿದ ಸದರಿ ಸ್ವತ್ತು ಹಿಂದೆ ಯಾರ ಹೆಸರಿನಲ್ಲಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ಆಸ್ತಿಯ ಸರ್ವೆ ನಂಬರ್ 160 ಇದ್ದು, ಅದು ಮೆಣಸಿಕ್ಯಾತನಹಳ್ಳಿ ಎಲ್ಲೆ ಗ್ರಾಮಕ್ಕೆ ಸೇರಿರುತ್ತದೆ. ನಾನು 6 ನೇ ಪ್ರತಿವಾದಿಗಿಂತ ಹಿಂದಯೇ ನನ್ನ ಜಮೀನನ್ನು ಖರೀದಿಸಿದ್ದು ಹಾಗಾಗಿ ನನಗೆ ನನ್ನ ಜಮೀನಿನ ಅಕ್ಕಪಕ್ಕದವರು ಗೊತ್ತಿದ್ದು ಹಾಗಾಗಿ 6 ನೇ ಪ್ರತಿವಾದಿಯ ಆಸ್ತಿಯ ಹಿಂದಿನ ಮಾಲೀಕರು ಯಾರೆಂದು ನನಗೆ ತಿಳಿದಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ನಾನು ನನ್ನ ಆಸ್ತಿಯ ಬಗ್ಗೆ ಹೇಳಿರುವುದಿಲ್ಲ ಎಂದರೆ ಸರಿ. 6 ನೇ ಪ್ರತಿವಾದಿ ಕಪನಯ್ಯನವರ ಮಗನಿಂದ ದಾವಾ ಸ್ವತ್ತಾದ ಸರ್ವೆ ನಂಬರ್ 160 ರಲ್ಲಿ 25 ಗುಂಟೆಯನ್ನು ಖರೀದಿಸಿರುತ್ತಾರೆ.

ಕಪನಯ್ಯನವರಿಗೆ ಒಬ್ಬ ಮಗ ಮತ್ತು 4 ಜನ ಹೆಣ್ಣು ಮಕ್ಕಳು ಇರುತ್ತಾರೆ. ಈಗ ನ್ಯಾಯಾಲಯದ ಮುಂದೆ ಇರುವ ವಾದಿಯು ಸದರಿ ಕಪನಯ್ಯನವರ ಮಗಳು ಇರುತ್ತಾರೆ ಎಂದರೆ ಸರಿ. ಸದರಿ ಸ್ವತ್ತು ಕಪನಯ್ಯನವರ ಸ್ವಯಾರ್ಜಿತ ಸ್ವತ್ತು ಎಂದರೆ ಸರಿ. ಕಪನಯ್ಯನವರು ಮೃತಪಟ್ಟಿರುವುದು ಸರಿ. ಆದರೆ ಅವರು ಮೃತಪಟ್ಟ ದಿನಾಂಕ ನನಗೆ ಹೇಳಲಾಗುವುದಿಲ್ಲ.

6 ನೇ ಪ್ರತಿವಾದಿ ನನ್ನ ಊರಿನವರಿದ್ದು ಮತ್ತು ಅವರು ನನ್ನ ಕುಲಬಾಂಧವರಿರುವ ಕಾರಣ ನಾನು ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿಯಾಗಿದೆ.

**(ಸಚಿನ್ ಹೆಚ್.ಆರ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ .ಎಂ .ಎಫ್ .ಸಿ ., ತಿ .ನರಸೀಪುರ**